ಅ) ಪ್ರಾದೇಶಿಕ ಅಸಮತೋಲನ ನಿವಾರಣೆಗಾಗಿ ಡಾ॥ ನಂಜುಂಡಪ್ಪ ವರದಿಯನುಸಾರ ಸರ್ಕಾರ ರೂಪಿಸಿರುವ ಯೋಜನೆಗಳೇನು ;

ಆ) ಉತ್ತರ ಕರ್ನಾಟಕ ಅತ್ಯಂತ ಹಿಂದುಳಿದ ತಾಲ್ಲೂಕುಗಳ ಸಮಗ್ರ ಅಭಿವೃದ್ಧಿಗಾಗಿ ಸರ್ಕಾರದ ಯೋಜನೆಗಳು ಯಾವ ಹಂತದಲ್ಲಿದೆ ;

ಇ) ಶೀಘ್ರ ಅನುಷ್ಠಾನಕ್ಕಾಗಿ ಕ್ರಿಯಾ ಯೋಜನೆಗಳನ್ನು ರೂಪಿಸುವ ಪ್ರಕ್ರಿಯೆಗೆ ಚಾಲನೆ ನೀಡಲಾಗಿದೆಯೇ ?

ಉತ್ತರ

ಅ) ೨೦೦೭–೦೮ನೇ ಸಾಲಿನಲ್ಲಿ ಪ್ರಾದೇಶಿಕ ಅಸಮತೋಲನಾ ನಿವಾರಣಾ ಸಮಿತಿಯು ನೀಡಿರುವ ಶಿಫಾರಸ್ಸಿನ ಅನುಷ್ಠಾನಕ್ಕೆ ಪ್ರತ್ಯೇಕವಾಗಿ ೧೫೭೭.೫೦ ಕೋಟಿ ರೂಗಳನ್ನು ನಿಗದಿಪಡಿಸಿದ್ದು ಈ ಅನುದಾನವನ್ನು ೧೧೪ ತಾಲ್ಲೂಕುಗಳಿಗೆ ೫೦:೩೦:೨೦ ರ ಅನುಪಾತದಲ್ಲಿ ವಿಶೇಷ ಅಭಿವೃದ್ಧಿ ಯೋಜನೆಯನ್ನು ಸಂಬಂಧಪಟ್ಟ ಇಲಾಖೆಗಳಿಂದ ನಿರೀಕ್ಷಿಸಲಾಗಿದೆ.

ಆ) ಉತ್ತರ ಕರ್ನಾಟಕದ ಹಿಂದುಳಿದ ತಾಲ್ಲೂಕುಗಳಿಗೂ ಸಹ ಮೇಲೆ ತಿಳಿಸಿದ ಕಾರ್ಯಕ್ರಮ ಅನ್ವಯವಾಗಲಿದೆ.

ಇ) ಚಾಲನೆ ನೀಡಲಾಗಿದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : ೧೮೦೮ (೨೩೮೮)

ಸದಸ್ಯರ ಹೆಸರು : ಶ್ರೀ ಚನ್ನಬಸವರಾಜ್ (ಅಪ್ಪಾಜಿ) ಶಂಕರರಾವ್ ನಾಡಗೌಡ (ಮುದ್ದೇಬಿಹಾಳ)

ಉತ್ತರಿಸುವವರು : ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು)

ಪ್ರಶ್ನೆ

ಅ) ಮುದ್ದೇಬಿಹಾಳ ತಾಲ್ಲೂಕಿನಲ್ಲಿ ಮಿನಿ ವಿಧಾನಸೌಧ ನಿರ್ಮಿಸಲು ಸರ್ಕಾರ ನಿರ್ಧರಿಸಿದೆಯೇ ;

ಆ) ಹಾಗಿದ್ದಲ್ಲಿ, ಮಿನಿ ವಿಧಾನಸೌಧವನ್ನು ಕಾಮಗಾರಿಯನ್ನು ೨೦೦೭-೦೮ರ ಪ್ರಾರಂಭಿಸಲಾಗುವುದೇ;

ಇ) ಕಾಮಗಾರಿಕೆ ಕ್ರಿಯಾ ಯೋಜನೆ ಪ್ರತಿ ವರ್ಷ ನಮೂದಾಗುತ್ತಿದ್ದರೂ, ಇಲ್ಲಿಯವರೆಗೆ ಈ ಕಾಮಗಾರಿಯನ್ನು ಪ್ರಾರಂಭಿಸದಿರಲು ಕಾರಣಗಳೇನು

ಈ) ೨೦೦೭-೦೮ ರಲ್ಲಿ ಈ ಕಾಮಗಾರಿಕೆ ಖರ್ಚು ಮಾಡಲಾಗುವ ಹಣವೆಷ್ಟು ;

ಉ) ಈ ಕಾಮಗಾರಿಯ ಅಂದಾಜು ವೆಚ್ಚವನ್ನು ಹಾಗೂ ಇದನ್ನು ಯಾವಾಗ ಪೂರ್ಣಗೊಳಿಸಲು ಅಂದಾಜು ಮಾಡಲಾಗಿದೆ.

ಉತ್ತರ

ಅ) ಹೌದು.

ಆ) ಹೌದು.

ಇ) ಈ ಕಾಮಗಾರಿಯು ಅಂದಾಜು ಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆಯನ್ನು ೨೦೦೬-೦೭ ರಲ್ಲಿ ನೀಡಲಾಗಿದೆ.

೨೦೦೬-೦೭ ನೇ ಸಾಲಿನಲ್ಲಿ ಈ ಕಾಮಗಾರಿಯ ಅಂದಾಜು ಮೊತ್ತ ರೂ. ೧೦೦.೦೦ ಲಕ್ಷಗಳ ಅಂದಾಜಿನಲ್ಲಿ ಸೇರ್ಪಡೆಯಾಗಿದ್ದು, ಈ ಕಾಮಗಾರಿಯನ್ನು ಇದೇ ಆರ್ಥಿಕ ವರ್ಷದಲ್ಲಿ ಕೈಗೆತ್ತಿಕೊಳ್ಳಲು ಕ್ರಮ ತೆಗೆದುಕೊಳ್ಳಲಾಗುವುದು.

ಈ) ಉದ್ಭವಿಸುವುದಿಲ್ಲ.

ಉ) ಅಂದಾಜು ಮೊತ್ತ ರೂ. ೧೦೦.೦೦ ಲಕ್ಷಗಳು ಅನುದಾನದ ಲಭ್ಯತೆಯನ್ನು ಆಧರಿಸಿ ಹಂತ ಹಂತವಾಗಿ ಈ ಕಾಮಗಾರಿಯನ್ನು ಪೂರ್ಣಗೊಳಿಸುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : ೧೮೦೯ (೨೩೮೯)

ಸದಸ್ಯರ ಹೆಸರು : ಶ್ರೀ ಚನ್ನಬಸವರಾಜ್ (ಅಪ್ಪಾಜಿ) ಶಂಕರರಾವ್ ನಾಡಗೌಡ (ಮುದ್ದೇಬಿಹಾಳ)

ಉತ್ತರಿಸುವವರು : ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು)

ಪ್ರಶ್ನೆ

ಅ) ಬಿಜಾಪುರ ಜಿಲ್ಲೆಯಲ್ಲಿ ಸುವರ್ಣಕಾಯಕ ತರಬೇತಿ ಉದ್ಯೋಗ ಯೋಜನೆಯಡಿಯಲ್ಲಿ ಎಷ್ಟು ನಿರುದ್ಯೋಗಿಗಳಿಗೆ ತರಬೇತಿ ನೀಡಲಾಗಿದೆ (ತಾಲ್ಲೂಕುವಾರು ಮಾಹಿತಿ ನೀಡುವುದು) ;

ಆ) ಬಿಜಾಪುರ ಜಿಲ್ಲೆಯಲ್ಲಿರುವ ಕೈಗಾರಿಕೆಗಳೆಷ್ಟು ;

ಬಿಜಾಪುರ ಜಿಲ್ಲೆಯ ನಿರುದ್ಯೋಗಿಗಳಿಗೆ ಉದ್ಯೋಗ ತರಬೇತಿ ನೀಡಲು ಉದ್ಯೋಗ ಮೇಳವನ್ನು ಬಿಜಾಪುರದಲ್ಲಿ ಏರ್ಪಡಿಸಲಾಗುತ್ತದೆಯೇ;